## 18. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬರದವಳ್ಳಿ

### ಅಕ್ಷರ ದಾಸೋಹ ಕೊಠಡಿ ಮೇಲ್ಛಾವಣಿ:-




ಅಕ್ಷರ ದಾಸೋಹ ಮತ್ತು ದಾಸ್ತಾನು ಕೊಠಡಿ ಸೋರುತ್ತಿದ್ದವು ಇದನ್ನು ಗಮನಿಸಿದ ದಾನಿಗಳು ಎಸ್.ಡಿ.ಎಮ್.ಸಿ ಯವರ ಸಹಕಾರದಿಂದ ಮೇಲ್ಛಾವಣಿ ಮಾಡಿಸಿ ಸೋರುತ್ತಿರುವ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಲಾಯಿತು.

### ಕೈ ತೋಟ ನಿರ್ಮಾಣ



ಸದರಿ ಶಾಲೆಯ ಆವರಣದಲ್ಲಿ ಗಿಡಮರಗಳಿರಲಿಲ್ಲ. ಇದನ್ನು ಗಮನಿಸಿ ಶಾಲೆಯಲ್ಲಿ ಸಾಂಕೇತಿಕವಾಗಿ ಚಿಕ್ಕ ಕೈ ತೋಟವನ್ನು ನಿರ್ಮಿಸಲಾಗಿದೆ.

## ಶಾಲೆಯಲ್ಲಿ ಕೈ ತೊಳೆಯುವ ಘಟಕ ಸ್ಥಾಪನೆ:



ಮಕ್ಕಳಿಗೆ ಬಿಸಿಯೂಟ ಸೇವನೆಯ ನಂತರ ಕೈ ತೊಳೆಯಲು ಐಆವುದೇ ಅನುಕೂಲ ಇರಲಿಲ್ಲ. ಶ್ರೀಯುತ ಮನೋಹರ ಗೌಡರು ಬರದವಳ್ಳಿ ಇವರನ್ನು ಕೇಳಿಕೊಂಡಾಗ ಇವರು ಒಪ್ಪಿ ಸುಮಾರು ಹತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ಮಕ್ಕಳಿಗೆ ಕೈ-ತೊಳೆಯುವ ಘಟಕ ಸ್ಥಾಪಿಸಿ ಕೊಟ್ಟಿದ್ದಾರೆ. ಇವರಿಗೆ ಶಾಲಾ ಮುಖ್ಯೋಪಾಧ್ಯಾಯರು ಮಕ್ಕಳಿಂದ ಎಸ್‌ಡಿಎಮ್‌ಸಿಯವರಿಂದ ಅಭಿನಂದನೆಯನ್ನು ಸಲ್ಲಿಸುತ್ತೇವೆ

## ಶುದ್ದ ನೀರಿನ ಘಟಕ ಸ್ಥಾಪನೆ:

**ವೆಚ್ಚ: 4,85,000.00**



ಶಾಲೆಯಲ್ಲಿ ಮಕ್ಕಳಿಗೆ ಕುಡಿಯಲು ನೀರಿನ ಸಮಸ್ಯೆ ಇತ್ತು. ಇದನ್ನು ಗಂಭೀರವಾಗಿ ಪರಿಗಣಿಸಿ ಭೂಸೇನ ನಿಗಮದ ಇನ್ಸ್‌ಪೆಕ್ಟರ್ ಅಣ್ಣಪ್ಪನವರ ಸಹಕಾರದಿಂದ ಶಾಲೆಯ ಆವರಣದಲ್ಲಿ ಮಕ್ಕಳಿಗೆ ಕುಡಿಯಲು ಶುದ್ಧ ನೀರಿನ ಘಟಕವನ್ನು ಸ್ಥಾಪಿಸಲಾಯಿತು. ಸಹಕರಿಸಿದ ಎಲ್ಲಾ ಮಹನೀಯರಿಗೆ ಮುಖ್ಯೋಪಾಧ್ಯಾಯರು ಎಸ್.ಡಿ.ಎಮ್.ಸಿ ಬಳಗ ಮಕ್ಕಳು ಅಭಿನಂದನೆ ಸಲ್ಲಿಸುತ್ತದೆ.

## ಶಾಲೆಗೆ ಸುಣ್ಣ ಬಣ್ಣ ಮಾಡಿಸಿದ್ದು **ವೆಚ್ಚ: 70,0000**



ಸದರಿ ಶಾಲೆಯು ಬಣ್ಣ ಕಾಣದೆ ತುಂಬಾ ವರ್ಷಗಳು ಆಗಿತ್ತು ಶಾಲೆಯು ತನ್ನ ಸೌಂದರ್ಯ ಕಳೆದುಕೊಂಡಿತ್ತು. ಮಕ್ಕಳ ದಾಖಲಾತಿ ಹೆಚ್ಚಿಸಲು ಶಾಲಯು ಆಕರ್ಷಣಿಯವಾಗಿ ಕಂಗೊಳಿಸಲು ತಾಲ್ಲೂಕು ಪಂಚಾಯತ್‌ನ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ. ಅಶೋಕ್ ಬರದವಳ್ಳಿ ಇವರ ಅನುದಾನದಲ್ಲಿ 70,000,ರೂ ಪಡೆದು ಶಾಲೆಗೆ ಬಣ್ಣವನ್ನು ಬಡಿಯಲಾಯಿತು. ಶಾಲೆಯ ಶಿಕ್ಷಕ ವೃಂದ ಮತ್ತು ಎಸ್.ಡಿ.ಎಮ್.ಸಿ ಯವರು ಅಭಿನಂದನೆ ಸಲ್ಲಿಸುತ್ತದೆ.




## ಪೀಠೋಪಕರಣ ಖರೀದಿ ಮತ್ತು ಗೋಡೆ ಬರಹ :

ಪೀಠೋಪಕರಣದ ಕೊರತೆಯಿತ್ತು. ಸ್ವಲ್ಪ ಪೀಠೋಪ ಕರಣ ಖರೀದಿಸಲಾಯಿತು. ಶಾಲೆಯ ತರಗತಿ ಕೊಠಡಿಯ ಗೋಡೆ ಬರಹ ಮಾಡಿ ಶಾಲೆಯ ಸೌಂದರ್ಯ ಹೆಚ್ಚಿಸಲಾಯಿತು. ಇದರಿಂದ ಮಕ್ಕಳ ಜ್ಞಾನ ವೃದ್ಧಿಗೂ ಅನುಕೂಲವಾಯಿತು.

**ದಾನಿಗಳಿಂದ ತಡೆಗೋಡೆ ಬರಹ:**

**ವೆಚ್ಚ: 20,000**

ಶಾಲೆಗೆ ದಾನಿಗಳ ನೆರವಿನಿಂದ ಜ್ಞಾನ ಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳು, ಪ್ರಾಣಿಗಳ ಚಿತ್ರಗಳು, ಸ್ವಾತಂತ್ರ್ಯ ಹೋರಾಟಗಾರರು, ಸ್ವಚ್ಛಭಾರತ್ ಕಲ್ಪನೆಯ ಚಿತ್ರಗಳು ಶೌಚಾಲಯ ಬಳುಸುವುದರಿಂದ ಆಗುವ ಲಾಭಗಳು ಇತ್ಯಾದಿಗಳ ಕಲ್ಪನೆಯನ್ನು ಕುರಿತ ಚಿತ್ರಗಳನ್ನು ಶಾಲಯ ತಡೆಗೋಡೆಯ ಮೇಲೆ ದಾನಿಗಳ ನೆರವಿನಿಂದ ಬರೆಸಲಾಯಿತು. ಸಹಕರಿಸಿದ ಎಲ್ಲಾ ದಾನಿಗಳಿಗೆ ಶಾಲಯ ಆಡಳತ ಮಂಡಳ ಅಭಿನಂದನೆ ಸಲ್ಲಿಸುತ್ತದೆ.



ಕಂದಾಯ ಮಂತ್ರಿಗಳಾದ ಶ್ರೀ ಮಾನ್ಯ ಕಾಗೋಡು ತಿಮ್ಮಪ್ಪನವರು ಮೂರು ಶಾಲಾ ಕೊಠಡಿಗಳ ಮೇಲ್ಛಾವಣಿ ದುರಸ್ಥಿಗೆ 7 ಲಕ್ಷ ರೂಪಾಯಿಗಳನ್ನು ವಿಶೇಷ ಅನುದಾನದಡಿ ಮಂಜೂರು ಮಾಡಿದ್ದರು. ಅವರನ್ನು ಶಾಲಾ ವಾರ್ಷಿಕೋತ್ಸವಕ್ಕೆ ಶಾಲೆಗೆ ಕರೆಸಿ ಎಸ್.ಡಿ.ಎಮ್.ಸಿ ಯವರು ಮತ್ತು ಶಿಕ್ಷಕರು ಸನ್ಮಾನಿಸುತ್ತಿರುವ ಸನ್ನಿವೇಶ ಸನ್ಮಾನ್ಯರಿಗೆ ಶಾಲೆಯ ಆಡಳತ ಮಂಡಳ ಅಭಿನಂದನೆ ಸಲ್ಲಿಸುತ್ತದೆ.



## ಮಾನ್ಯ ಕಾಗೋಡು ತಿಮ್ಮಪ್ಪನವರ ಶಾಲಾ ಭೇಟಿ




ಶಾಲೆಯಲ್ಲಿ ಮೂರು ಕೊಠಡಿಗಳ ಮೇಲ್ಛಾವಣಿ ಮುರಿದು ಬಿದ್ದು ಹೋದ ಸಂದರ್ಭದಲ್ಲಿ ಶಾಲೆಗೆ ಬೇಟಿ ನೀಡಿ ಪರಿಶೀಲಿಸಿ ಅಧಿಕಾರಿಗಳು ಸಂಬಂಧಿಸಿದ ಜನಪ್ರತಿನಿಧಿಗಳ ಜೊತೆ ನಡೆದ ಸಂಭಾಷಣೆಯ ಸನ್ನಿವೇಶ.

**ಶಾಲಾ ವಾರ್ಷಿಕೋತ್ಸವದಲ್ಲಿ ಉದ್ಘಾಟಿಸುತ್ತಿರುವುದು:**



ಶಾಲಾ ಮಕ್ಕಳ ಸವಿಜೇನ ಸಂಜೆ ಎಂಬ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿ ಉದ್ಘಾಟಿಸಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ ಮುಖ್ಯೋಪಾಧ್ಯಾಯರ ಹೆಚ್ಚುವರಿ ಕೊಠಡಿ ಬೇಡಿಕೆಗೆ ಮಂಜೂರಾತಿಗೆ ಒಪ್ಪಿಗೆ ನೀಡಿ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಸಂದರ್ಭ ಹೆಚ್ಚುವರಿಯಾಗಿ ಎರಡು ಕೊಠಡಿಗಳ ಮಂಜೂರು ಮಾಡಿಸಿರುತ್ತಾರೆ. ಸುಮಾರು 17 ಲಕ್ಷದ 40 ಸವಿರ ರೂಪಾಯಿಗಳನ್ನು ಮಂಜೂರು ಮಾಡಿಸಿರುತ್ತಾರೆ. ಸನ್ಮಾನ್ಯರಿಗೆ ಶಿಕ್ಷಕ ಬಳಗ ಮತ್ತು ಎಸ್.ಡಿ.ಎಮ್.ಸಿ ಗ್ರಾಮಸ್ಥರು ಅಭಿನಂದನೆ ಸಲ್ಲಿಸುತ್ತೇವೆ.